ಅರ್ಥವಾಗುವುದು ಎರಡೂ ಮುಖಗಳು ಪರಿಚಯವಾದಾಗಲೇ.

ಶಾಂತಿ ಎಂದರೆ ಏನು ಅನ್ನುವುದನ್ನ ಸುಡಾನಿನ ಮಹಿಳೆ ನಂಗೆ ಹೇಳಿದ್ದು ಹೀಗೆ: 'ಶಾಂತಿ ಅಂದರೆ ನನ್ನ ಕಾಲಿನ ಉಗುರುಗಳು, ಈಗ ಮತ್ತೆ ಬೆಳೀತಿದೆ.' ಆಕೆ ದಕ್ಷಿಣ ಸುಡಾನಿನ ಪ್ರಾಂತ್ಯದವಳು. 20 ವರ್ಷಗಳ ದೀರ್ಘ ಯುದ್ಧ ಲಕ್ಷಗಟ್ಟಲೇ ಜನರನ್ನು ಬಲಿತೆಗೆದುಕೊಂಡಿತು. 50 ಲಕ್ಷ ಮಂದಿ ನಿರಾಶ್ರಿತರಾದರು. ಎಷ್ಟೋ ಮಂದಿ ಮಹಿಳೆಯರನ್ನು ಕ್ರಾಂತಿಕಾರಿಗಳು, ಸೈನಿಕರು ಅಡಿಯಾಳಾಗಿಸಿಕೊಂಡರು. ಲೈಂಗಿಕತೃಷೆ ತೀರಿಸಲು, ಆಯುಧ, ನೀರು, ಆಹಾರ ಹೊತ್ತೊಯ್ಯಲು ಇವರುಗಳನ್ನು ಬಳಸಿಕೊಂಡರು. ಆ 20 ವರ್ಷಗಳು ಮಹಿಳೆಯರು ಹೀಗೆ ಬದುಕಿದರು. ಅಂತೂ ಯುದ್ಧ ನಿಂತು ಆ ಸುಡಾನಿನ ಮಹಿಳೆ ಒಂದೆಡೆ ನೆಲೆ ನಿಂತಳು. ಅದನ್ನೇ ಆಕೆ ಹೇಳಿದ್ದು ಶಾಂತಿ ಎಂದರೆ ನನ್ನ ಕಾಲುಗುರುಗಳು ಮತ್ತೆ ಬೆಳೆಯುತ್ತಿದೆ ಅಂತ. ಈ ದೃಷ್ಟಿಕೋನದಿಂದ ಶಾಂತಿಯನ್ನು ನೋಡಿದರೆ ನಮಗೆ ಅರ್ಥವಾಗುವ ಸತ್ಯ ಬೇರೆ ತೆರನಾದದ್ದು ಅಲ್ಲವೇ.

ಕಾಂಗೋ ಮಹಿಳೆಯೊಬ್ಬಳು ಯುದ್ಧದಲ್ಲಿ ನಿರಾಶ್ರಿತಳಾಗಿದ್ದಳು. ನಮ್ಮ ಸಂಸ್ಥೆಯ ವತಿಯಿಂದ ಆಕೆಯ ಜೀವನೋಪಾಯಕ್ಕೆ ಕೆಲಸವೊಂದನ್ನು ಕಲ್ಪಿಸಿದೆವು. ಆಕೆ ತನ್ನ ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದು ಹೀಗೆ : 'ನನ್ನ ಮಕ್ಕಳು ತಮ್ಮ ಕಣ್ಣ ಮುಂದೆಯೇ ಅವರ ತಂದೆಯನ್ನ, ಒಂಬತ್ತು ವರ್ಷದ ತಮ್ಮ ಸೋದರನನ್ನ ಕೊಂದಿದ್ದನ್ನ, ತಮ್ಮ ತಾಯಿಯ ಅತ್ಯಾಚಾರ ನಡೆದದ್ದನ್ನ ನೋಡಿದರು. ನಾನು ಹೇಗೋ ಬದುಕು ಕಟ್ಟಿಕೊಂಡು ಅವರನ್ನು ಸಲಹುತ್ತಿದ್ದೇನೆ. ಸ್ಕೂಲಿಗೆ ಕಳಿಸುತ್ತಿದ್ದೇನೆ. ನನಗೀಗ ಬದುಕಿನ ಕುರಿತು ಭಯವಿಲ್ಲ. ಆದರೆ ಅವರ

